**ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ**

ಸಿ ಸಿ ನಂ. 479/2024

ಸಾಕ್ಷಿಗೆ ದಿನಾಂಕ 24-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 2

| | | |
|---|---|---|
| ಹೆಸರು | ಃ | ಕಿರಣ್ |
| ತಂದೆಯ ಹೆಸರು | ಃ | ಪರಶುರಾಮಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಮಸಾರಿ ನೆಲ್ಲುಕುದರಿ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿತರು ನನಗೆ ಸಂಬಂಧಿಕರು ಇರುತ್ತಾರೆ. ಚಾಸಾ-1 ನನ್ನ ಅಣ್ಣ, ಚಾಸಾ-5 ನನ್ನ ತಾಯಿ, ಚಾಸಾ-6 ನನ್ನ ತಂದೆ.

ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ, ಆರೋಪಿತರು ನಮ್ಮ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ಜೀವಬೆದರಿಕೆ ಹಾಕಿಲ್ಲ, ನನಗೆ ಚಪ್ಪಲಿಯಿಂದ ಹೊಡೆದಿಲ್ಲ. ಚಾಸಾ-1 ರವರಿಗೆ ಯಾವುದೇ ಕಿರುಕುಳ ನೀಡಿಲ್ಲ, ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಸ್ಥಳದ ಪಂಚನಾಮೆಯಾಗಿದ್ದು ಇರುತ್ತದೆ. ಸಾಕ್ಷಿಗೆ ಒಂದು ಕಚ್ಚಾ ನಕಾಶೆ ತೋರಿಸಲಾಗಿ ಸಾಕ್ಷಿಯು ಎರಡೂ ದಾಖಲೆಗಳಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 2 ಎ ಎಂದು ಮತ್ತು ನಿಪಿ-3 ಮತ್ತು ನಿಪಿ-3 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳಿಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ನೊಂದ ವ್ಯಕ್ತಿ ಸುಟ್ಟುಕೊಂಡ ಸ್ಥಳದ ಜಪ್ತು ಪಂಚನಾಮೆಯಾಗಿದ್ದು ಅದನ್ನು ನಿಪಿ-4 ಎಂದು ಮತ್ತು ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಯಾವುದೇ ವಸ್ತುಗಳನ್ನು ಪೋಲೀಸರ ಮುಂದೆ ಹಾಜರುಪಡಿಸಿಲ್ಲ. ಸದರಿ ದಾಖಲೆಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಒಟ್ಟು 6 ಪೋಟೋಗಳನ್ನು ತೋರಿಸಲಾಗಿ

ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-5 ರಿಂದ 10 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಯಾವ ಕಾರಣಕ್ಕಾಗಿ ಪೋಲೀಸರು ತೆಗೆದರೆಂದು ನನಗೆ ಗೊತ್ತಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 30-03-2024 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಚಾಸಾ-8 ರವರ ಟ್ರಾಕ್ಟರನ್ನು ನಮ್ಮ ಹೊಲಕ್ಕೆ ಟ್ರೈಲರ್ ಹೊಡೆಯಲು ಬಾಡಿಗೆಗೆ ಕೇಳಿಕೊಂಡಿದ್ದು ಅವರು ಚಾಸಾ-7 ರವರ ಮೂಲಕ ಸದರಿ ವಾಹನವನ್ನು ಕಳುಹಿಸಿಕೊಟ್ಟಿದ್ದು ನಾನು ಮತ್ತು ಚಾಸಾ-1 ಹಾಗೂ ಚಾಸಾ-7 ರವರು ಸೇರಿ ನಮ್ಮ ಹೊಲಕ್ಕೆ ಟ್ರಾಕ್ಟರಿನಲ್ಲಿ ಹೋಗಿರುತ್ತೇವೆಂದರೆ ಸರಿಯಲ್ಲ. ಬೆಳಿಗ್ಗೆ 9 ಗಂಟೆ ಸುಮಾರಿಗೆ ಟ್ರಾಕ್ಟರ್ ಹೊಡೆಯುವ ಸಮಯದಲ್ಲಿ 1ನೇ ಆರೋಪಿ ಏಕಾಏಕಿ ಬಂದು ನಮ್ಮ ಜಮೀನಿನಲ್ಲಿರುವ ಟೋಮ್ಯಾಟೋ ಸಾಲುಗಳನ್ನು ಟ್ರಾಕ್ಟರಿನಿಂದ ಮುರಿದಿರುತ್ತೀರಿ ಅಂತಾ ಹೇಳಿ ನನಗೂ ಮತ್ತು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಮತ್ತು ನಮಗೆ ಮುಂದೆ ಹೋಗದಂತೆ ಅಡ್ಡಗಟ್ಟಿ ನಿಲ್ಲಿಸಿ ಕಲ್ಲುಗಳಿಂದ ಹಲ್ಲೆ ಮಾಡಿರುತ್ತಾನೆಂದರೆ ಸರಿಯಲ್ಲ. ಅಲ್ಲೇ ಇದ್ದ 3ನೇ ಆರೋಪಿ ನನ್ನ ಮೇಲೆ ಚಪ್ಪಲಿಯಿಂದ ಹಲ್ಲೆ ಮಾಡಿರುತ್ತಾನೆಂದರೆ ಸರಿಯಲ್ಲ ಚಾಸಾ-7 ರವರು ಗಲಾಟೆ ಬಿಡಿಸಿರುತ್ತಾರೆಂದರೆ ಸರಿಯಲ್ಲ.

ದಿಃ31-03-2024 ರಂದು ಬೆಳಿಗ್ಗೆ 9 ಗಂಟೆ ಸುಮಾರಿನಲ್ಲಿ ನಾನು ಮತ್ತು ಚಾಸಾ-1 ರವರು ಹೆಚ್ ಬಿ ಹಳ್ಳಿಗೆ ಹೋಗುತ್ತಿರುವಾಗ ಆರೋಪಿತರು ನಮ್ಮ ಮನೆ ನಾಶವಾಲೀ ಎಂದು ಹೇಳುತ್ತಾ ನಮಗೆ ಅವಾಚ್ಯ ಶಬ್ದಗಳಿಂದ ಬೈದು ಚಾಸಾ-1 ರವರಿಗೆ ಸಿಟ್ಟು ಬರುವಂತೆ ಮಾಡಿದ್ದು ಚಾಸಾ-1 ರವರು ಅದರಿಂದ ಮನನೊಂದು ಪೆಟ್ರೋಲನ್ನು ತನ್ನ ಮೇಲೆ ಹಾಕಿಕೊಂಡು ಬೆಂಕಿ ಹಚ್ಚಿಕೊಂಡಿರುತ್ತಾನೆಂದರೆ ಸರಿಯಲ್ಲ. ಚಾಸಾ-1 ರವರಿಗೆ ನಾವು ಆಸ್ಪತ್ರೆಗೆ ಕರೆದುಕೊಂಡು ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ಘಟನೆಯ ಕುರಿತು ಪೋಲೀಸರು ನಿಪಿ-2 ಮತ್ತು 3 ರಂತೆ ಪಂಚನಾಮೆಯನ್ನು ದಿಃ03-04-2024 ರಂದು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಘಟನಾ ಸ್ಥಳದಲ್ಲಿ ಜರುಗಿಸಿ ನಿಪಿ-3 ರಂತೆ ನಕಾಶೆಯನ್ನು ತಯಾರಿಸಿ ಸ್ಥಳದಲ್ಲಿ ನಾನು ಹಾಜರುಪಡಿಸಿದ ಕಲ್ಲು ಮತ್ತು ಚಪ್ಪಲಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಮತ್ತು ನಿಪಿ-5 ರಿಂದ 7 ಫೋಟೋಗಳನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ಅದೇ ರೀತಿ ಅದೇ ದಿನ ಬೆಳಿಗ್ಗೆ 11.30 ರಿಂದ 12.30 ವರೆಗೆ ಚಾಸಾ-1 ರವರು ಬೆಂಕಿ ಹಚ್ಚಿಕೊಂಡಿದ್ದ ಸ್ಥಳದ ಪಂಚನಾಮೆ ಜರುಗಿಸಿ ಆ

ಸಮಯದಲ್ಲಿ ನಾನು ಹಾಜರುಪಡಿಸಿದ ಒಂದು ಅರ್ಧ ಸುಟ್ಟುಹೋದ ಪ್ಯಾಂಟ್, ಅಂಗಿ, ಟವೆಲ್ ಮತ್ತು ಬಾಟಲಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ ಮತ್ತು ಸ್ಥಳದಲ್ಲಿ ನಿಪಿ-8 ರಿಂದ 10 ರಂತೆ ಫೋಟೋ ತೆಗೆದಿರುತ್ತಾರೆಂದರೆ ಸರಿಯಲ್ಲ. ಸದರಿ ಪಂಚನಾಮೆಗಳನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪೋಲೀಸರು ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಾನು ದಿಃ03-04-2024 ರಂದು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಆರೋಪಿತರು ನ್ಯಾಯಾಲಯದ ಮುಂದಿರುವ ಚಪ್ಪಲಿ ಮತ್ತು ಕಲ್ಲುಗಳಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿಯಲ್ಲ. ಆ ದಿನ ಸ್ಥಳದಿಂದ ಮೇಲ್ಕಂಡ ಸುಟ್ಟ ಪ್ಯಾಂಟು, ಶರ್ಟ, ಟವೆಲ್ ಮತ್ತು ಬಾಟಲಿಯನ್ನು ಘಟನಾ ಸ್ಥಳದಿಂದ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ರಾಜೀಯಾಗಿದ್ದೇನೆಂದರೆ ಸರಿ. ಆ ಕಾರಣದಿಂದ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ